## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗದಗ ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಸುವ ಕುರಿತು

**ಓದಲಾಗಿದೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 309 ರಿಂದ 310.

**ಪ್ರಸ್ತಾವನೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 309 ರಿಂದ 310 ರ ಪ್ರಕಾರ ಜಿಲ್ಲಾ ಅಭಿವೃದ್ಧಿ ಯೋಜನೆ ಒಳಗೊಂಡಂತೆ ವಿಕೇಂದ್ರೀಕೃರಣ ಅಭಿವೃದ್ಧಿ ಯೋಜನೆಗಳನ್ನು ಸಿದ್ದಪಡಿಸುವುದು ಕಡ್ಡಾಯವಾಗಿರುತ್ತದೆ. ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಈ ಸಂಬಂಧ ರಾಜ್ಯ ಸರ್ಕಾರಗಳು ಎಲ್ಲಾ ಜಿಲ್ಲಾ ಯೋಜನಾ ಸಮಿತಿಗಳಿಗೆ ಸಮಗ್ರ ಜಿಲ್ಲಾ ಅಭಿವೃದ್ದಿ ಯೋಜನೆಗಳನ್ನು (ಸಿ.ಡಿ.ಡಿ.ಪಿ) ತಯಾರಿಸುವ ಕುರಿತು ಮಾರ್ಗಸೂಚಿಗಳನ್ನು ನೀಡುವಂತೆ ಸೂಚಿಸಿದೆ.

ಮೇಲೆ ಓದಲಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣಗಳು ಕೇಂದ್ರ ಸರ್ಕಾರದ ನಿರ್ದೇಶಗಳನ್ವಯ ಗದಗ ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕವಾಗಿ ಸಿದ್ದಪಡಿಸಲು ಉದ್ದೇಶಿಸಲಾಗಿದೆ. ಈ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದ ಕೋರ್ ಸಮಿತಿ ಮತ್ತು ಕಾರ್ಯಚರಣೆ ತಂಡವನ್ನು ರಚಿಸಲು ಪ್ರಸ್ತಾಪಿಸಿದೆ.

ಅದುದರಿಂದ, ಈ ಕೆಳಗಿನ ಆದೇಶ

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 159 ಜಿಪಸ 2017 (ಪಿ-3), ಬೆಂಗಳೂರು ದಿನಾಂಕ:30-05-2020**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳನ್ನು ಹಾಗೂ ಈ ಸಂಬಂಧ ಎಲ್ಲಾ ಸಂಬಂಧಿತ ಸಂಗತಿಗಳನ್ನು ಪರಿಗಣಿಸಿ ಗದಗ ಜಿಲ್ಲೆಯ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಕೆಗೆ ವಿವರವಾದ ಮಾರ್ಗಸೂಚಿಯೊಡನೆ ಜಿಲ್ಲಾ ಕೋರ್ ಸಮಿತಿ ಮತ್ತು ಕಾರ್ಯಚರಣೆ ತಂಡಗಳನ್ನು ಈ ಕೆಳಗಿನಂತೆ ರಚಿಸಿ ಆದೇಶಿಸಿದೆ.

**ಜಿಲ್ಲಾ ಕೋರ್ ಸಮಿತಿ**

| | | |
|---|---|---|
| 1. | ಡಾ. ಆನಂದ್. ಕೆ. ಐಎಎಸ್.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ<br>ಜಿಲ್ಲಾ ಪಂಚಾಯತ್, ಗದಗ | ಅಧ್ಯಕ್ಷರು |
| 2. | ಶ್ರೀ. ಡಿ.ಆರ್. ಪಾಟೀಲ್<br>ಸದಸ್ಯರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು | ಸದಸ್ಯರು |
| 3. | ಡಾ. ಗಣೇಶ್ ಪ್ರಸಾದ್, ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು | ಸದಸ್ಯರು |

| | | |
|---|---|---|
| 4. | ಡಾ. ಗೀತಾ ಬಂಗಾರಿ, ಬೋಧಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 5 | ಜಿಲ್ಲಾ ಸಂಖ್ಯಾಕಿಕ ಅಧಿಕಾರಿ, ಗದಗ | ಸದಸ್ಯರು |
| 6 | ಯೋಜನಾ ನಿರ್ದೇಶಕರು, ಜಿಲ್ಲಾ ನಗರ ಅಭಿವೃದ್ಧಿ ಕೋಶ, ಗದಗ | ಸದಸ್ಯರು |
| 7 | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗದಗ | ಸದಸ್ಯರು |
| 8 | ತಾಂತ್ರಿಕ ಸಹಾಯಕರು, ಎನ್.ಆರ್.ಡಿ.ಎಂ.ಎಸ್, ಗದಗ | ಸದಸ್ಯರು |
| 9 | ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಗದಗ | ಸದಸ್ಯ ಕಾರ್ಯದರ್ಶಿ |

**ಜಿಲ್ಲಾ ಕೋರ್ ಸಮಿತಿಯು ಈ ಕೆಳಗಿನ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.**

- ಸಮಿತಿಯು ಹದಿನೈದು ದಿನಗಳಿಗೊಮ್ಮೆ ಸಭೆ ಸೇರಿ ಗದಗ ಜಿಲ್ಲೆಯ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ (ಸಿ.ಡಿ.ಡಿ.ಪಿ) ತಯಾರಿಸಲು ವಿವರವಾದ ಮಾರ್ಗಸೂಚಿಗಳನ್ನು ರೂಪಿಸುವುದು.
- ಸಮಿತಿಯು ವಿವಿಧ ಕಾರ್ಯ ಚಟುವಟಿಕೆಗಳಿಗೆ ಒಂದು ಕಾಲಾವಧಿಯನ್ನು ನಿಗದಿಪಡಿಸಿ ಹಾಗೂ ಅದರ ಕರಡನ್ನು ಆಗಸ್ಟ್ 2020 ರ ಒಳಗೆ ರಾಜ್ಯ ಸಲಹಾ ತಂಡಕ್ಕೆ ಸಲ್ಲಿಸಬೇಕು.
- ಸಮಿತಿಯು ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿಸಲು ಅವಶ್ಯವಿರುವ ಸಂಪನ್ಮೂಲ ಗುಚ್ಛ ತಯಾರಿಸಲು ಉಪಸಮಿತಿ ನೇಮಿಸಿಕೊಳ್ಳುವುದು.
- ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಸಲು ಅವಶ್ಯವಿರುವ ಅನುದಾನದ ಅಂದಾಜು ಸಿದ್ದಪಡಿಸಿ ರಾಜ್ಯ ಸರ್ಕಾರದ ವತಿಯಿಂದ ಗದಗ ಜಿಲ್ಲೆಗೆ ಬಿಡುಗಡೆ ಮಾಡಿರುವ ಹಾಗೂ ಪ್ರಸ್ತುತ ಎಎನ್ಎಸ್ಎಸ್ಐಆರ್‌ಡಿ&ಪಿಆರ್ ರಲ್ಲಿ ಜಮೆಯಾಗಿರುವ ಹಣ 2.5 ಕೋಟಿಗಳಿಲ್ಲಿ ಭರಿಸುವುದು. ಕುಟುಂಬಶ್ರೀ ರಾಷ್ಟ್ರೀಯ ಸಂಪನ್ಮೂಲ ಸಂಸ್ಥೆಯು ಒಂದು ಮಾದರಿ ಗ್ರಾಮ ಪಂಚಾಯತ್ ಸೃಜಿಸಲು ಕೈಗೊಳ್ಳುವ ಪೂರ್ವಬಾವಿ ಚಟುವಟಿಕೆಗಳಿಗೆ ತಗಲುವ ವೆಚ್ಚವನ್ನು ಈ ಅನುದಾನದಿಂದಲೆ ಬಳಸುವುದು. ಜಿಲ್ಲಾ ಕೋರ್ ಸಮಿತಿಯು ಈ ಮೊತ್ತವನ್ನು ಹಿಂಬರಿಸಲು ಎಎನ್ಎಸ್ಎಸ್ಐಆರ್‌ಡಿ&ಪಿಆರ್ ಸಂಸ್ಥೆಯಗೆ ಶಿಫಾರಸ್ಸು ಮಾಡುವುದು.
- ಪ್ರತಿಯೊಂದು ಕಾರ್ಯಚರಣೆ ತಂಡಕ್ಕೂ ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿಸಲು ನಿರ್ದಿಷ್ಟವಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು (ಟಿಒಆರ್) ನಿರ್ದಿಷ್ಟಪಡಿಸಬೇಕು. ಆಯಾ ಕಾರ್ಯಚರಣೆ ತಂಡಗಳು ತಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಿರ್ದಿಷ್ಟವಾದ ಕೈಪಿಡಿಯನ್ನು ಸಿದ್ದಪಡಿಸಿ ಅದಕ್ಕೆ ಜಿಲ್ಲಾ ಕೋರ್ ಸಮಿತಿಯು ಅನುಮೋದನೆ ನೀಡಬೇಕು.
- ಕಾರ್ಯಚರಣೆ ತಂಡಗಳು ಜಿಲ್ಲೆಯ ದೂರಗಾಮಿ ಯೋಜನೆಗಳನ್ನು ತಯಾರಿಸಲು ಅವಶ್ಯವಿರುವ ನೆರವು ನೀಡುವುದು.
- ಕಾರ್ಯಚರಣೆ ತಂಡಗಳು ಜಿಲ್ಲೆಯ ಸಂಬಂಧಿಸಿದ ಕ್ಷೇತ್ರಗಳ ವರದಿಯನ್ನು ಅಂತಿಮಗೊಳಿಸಲು ನೆರವು ನೀಡಲು ಅರ್ಹ ಶೈಕ್ಷಣಿಕ ಪರಿಣಿತರನ್ನು ಗುರುತಿಸಲು ನೆರವು ನೀಡುವುದು.
- ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ಜಿಲ್ಲಾ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಸಂಯೋಜನೆಗೊಳಿಸಿ ಮತ್ತು ಕ್ರೋಡಿಕರಣದೊಂದಿಗೆ ಸಂಬಂಧಿಸಿದ ಪ್ರಾಧಿಕಾರದ ಪರ್ಯಾಲೋಚನೆಗೆ ಸಲ್ಲಿಸಬೇಕು. ಜಿಲ್ಲಾ ಸಮಗ್ರ ಯೋಜನೆಯು 10 ವರ್ಷಗಳ ದೂರದೃಷ್ಟಿ ಯೋಜನೆ, 5 ವರ್ಷಗಳ ಮುನ್ನೋಟ ಯೋಜನೆ ಹಾಗೂ 1 ವರ್ಷದ ಕ್ರಿಯಾ ಯೋಜನೆ ಒಳಗೊಂಡಿರಬೇಕು.

- ಸಮಿತಿಯು ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಸಾಮಾರ್ಥ್ಯಾಭಿವೃದ್ದಿಗಾಗಿ ಮಾಹಿತಿ ಶಿಕ್ಷಣ ಸಂವಾಹನ ಚಟುವಟಿಕೆಯ ಸಮಗ್ರ ಯೋಜನೆಯನ್ನು ರೂಪಿಸಬೇಕು.
- ಸಮಿತಿಯ ಅಧಿಕಾರೇತರ ಸದಸ್ಯರು ನಿಯಾಮಾನುಸಾರ ಪ್ರಯಾಣ ಭತ್ಯೆ ಹಾಗೂ ಹಾಜರಾತಿ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
- ಗದಗ ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನೆ ಸಿದ್ದಪಡಿಸಲು ಈ ಕೆಳಕಂಡ ಕಾರ್ಯಚರಣೆ ರಚಿಸಿದೆ.

| ಕ್ರ.ಸಂ. | ವಲಯ | ಸದಸ್ಯರು |
|---|---|---|
| 1 | ಜಿಲ್ಲಾ ಸಂಪನ್ಮೂಲ ಗುಚ್ಛ ಕಾರ್ಯಚರಣೆ ತಂಡ | • ಮುಖ್ಯ ಲೇಕ್ಕಾಧಿಕಾರಿ, ಜಿಲ್ಲಾ ಪಂಚಾಯತ್, ಗದಗ<br>• ಶ್ರೀ.ಪರ್ವಜ್‌ಖಾನ್,ಬೋಧಕರು, ಎಎನ್‌ಎಸ್‌ಎಸ್‌ಐಆರ್‌ಡಿ&ಪಿಆರ್, ಮೈಸೂರು<br>• ಲೇಕ್ಕಾಧಿಕಾರಿ, ಡಿಯುಡಿಸಿ, ಗದಗ<br>• ಪ್ರಮುಖ ಬ್ಯಾಂಕ್ ವ್ಯವಸ್ಥಾಪಕರು, ಗದಗ<br>• ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕ ಕೇಂದ್ರ<br>• ಪ್ರತಿನಿಧಿ, ರಾಜ್ಯ ಹಣಕಾಸು ಇಲಾಖೆ, ಬೆಂಗಳೂರು<br>• ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಗದಗ |
| 2 | ಕೃಷಿ ಮತ್ತು ಸಂಬಂಧಿತ ವಲಯ ಕಾರ್ಯಚರಣೆ ತಂಡ | • ಜಂಟಿ ನಿರ್ದೇಶಕರು, ಕೃಷಿ ಇಲಾಖೆ – ಸದಸ್ಯ ಕಾರ್ಯದರ್ಶಿ<br>• ಡಾ. ಹೀರೆಗೌಡ, ನಿರ್ದೇಶಕರು, ಕೃಷಿ ವಿಜ್ಞಾನ ಕೇಂದ್ರ, ಹುಲಿಕೋಟೆ, ಗದಗ.<br>• ಶ್ರೀ ಪ್ರಮೋದ್ ಗೌಡ, ಬೋಧಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ<br>• ಪ್ರತಿನಿಧಿ, ಕೃಷಿ ವಿಶ್ವವಿದ್ಯಾಲಯ, ಧಾರವಾಡ<br>• ಪ್ರತಿನಿಧಿ, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ<br>• ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ<br>• ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ<br>• ಉಪ ನಿರ್ದೇಶಕರು, ರೆಷ್ಮೆ ಇಲಾಖೆ<br>• ಹಿರಿಯ ಸಹಾಯಕ ನಿರ್ದೇಶಕರು, ಒಳನಾಡು ಮೀನುಗಾರಿಕೆ ಇಲಾಖೆ<br>• ಜಿಲ್ಲೆ ಅರಣ್ಯಾಧಿಕಾರಿ, ಅರಣ್ಯ ಇಲಾಖೆ |
| 3 | ಜಲ ಸಂಪನ್ಮೂಲ ಕಾರ್ಯಚರಣೆ ತಂಡ | • ಜಂಟಿ ನಿರ್ದೇಶಕರು, ಕೃಷಿ ಇಲಾಖೆ – ಸದಸ್ಯ ಕಾರ್ಯದರ್ಶಿ<br>• ಶ್ರೀ. ಜಮದಾರ್ ಜೆ.ಕೆ. ಗದಗ<br>• ಕೆ.ಎಸ. ಮನೋಜ್‌ಕುಮಾರ್, ಬೋದಕರು, ಎಎನ್‌ಎಸ್‌ಎಸ್‌ಐಆರ್‌ಡಿ&ಪಿಆರ್, ಮೈಸೂರು<br>• ಶ್ರೀ ಸುರೇಶ ಲಮಣಿ, ಬೋದಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ<br>• ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ<br>• ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ |

| | | |
|---|---|---|
| | | • ಕಾರ್ಯಪಾಲಕ ಅಭಿಯಂತರರು, ಗ್ರಾಮೀಣಾ ನೀರು ಸರಬರಾಜು.<br>• ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ. |
| 4 | ಮೂಲಭೂತ ಸೌಕರ್ಯ (ಗ್ರಾಮೀಣ) ಕಾರ್ಯಚರಣೆ ತಂಡ | • ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಗದಗ – ಸದಸ್ಯ ಕಾರ್ಯದರ್ಶಿ<br>• ಯೋಜನಾ ನಿರ್ದೇಶಕರು, ಜಿ.ಪಂ.ಗದಗ<br>• ಶ್ರೀ. ಕಪ್ಪಣ್ಣನವರು, ಗದಗ<br>• ಶ್ರೀ. ದಂಡಿಗದಸರ್, ಮುಖ್ಯ ಯೋಜನಾಧಿಕಾರಿ (ನಿ),ಜಿ.ಪಂ.ಗದಗ<br>• ಶ್ರೀ. ವೇಣುಗೋಪಾಲ್ ಪಿ.ಜಿ. ಬೋಧಕರು, ಎಎನ್‌ಎಸ್‌ಎಸ್‌ಐಆರ್‌ಡಿ&ಪಿಆರ್, ಮೈಸೂರು<br>• ಡಾ. ಶ್ರೀಧರ್ ಹಾದಿಮನಿ, ಬೋಧಕರು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ<br>• ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜೀನಿಯರಿಂಗ್ ವಿಭಾಗ<br>• ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ<br>• ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.<br>• ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ<br>• ಕಾರ್ಯಪಾಲಕ ಅಭಿಯಂತರರು, ಎಸ್‌ಕಾಮ್ ಗದಗ<br>• ಸಹಾಯಕ ಮಹಾವ್ಯವಸ್ಥಾಪಕರು, ಬಿ.ಎಸ್.ಎನ್.ಎಲ್ ಗದಗ |
| 5 | ಪರಿಸರ ಮತ್ತು ಹವಮಾನ ಬದಲಾವಣೆ ಕಾರ್ಯಚರಣೆ ತಂಡ | • ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಟೆರಿಟೋರಿಯಲ್), ಗದಗ – ಸದಸ್ಯ ಕಾರ್ಯದರ್ಶಿ.<br>• ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಗದಗ<br>• ಶ್ರೀ. ಪ್ರಕಾಶ್ ಭಟ್, ನಿರ್ದೇಶಕರು, ಎಸ್.ಕೆ.ಡಿ.ಆರ್.ಬಿ, ತರಬೇತಿ ಕೇಂದ್ರ.<br>• ಶ್ರೀ ರಾಜೇಂದ್ರ ದೇಸಾಯಿ, ಬೋಧಕರು, ಎಎನ್‌ಎಸ್‌ಎಸ್‌ಐಆರ್‌ಡಿ&ಪಿಆರ್, ಮೈಸೂರು<br>• ಶ್ರೀ ಮಹೇಶ್ ಡಿ.ಬಿ. ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ<br>• ಪ್ರಾದೇಶಿಕ ಸಾರಿಗೆ ಅಧಿಕಾರಿ, ಗದಗ<br>• ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ<br>• ಜಿಲ್ಲಾ ಪರಿಸರ ಅಧಿಕಾರಿ, ಪಿ.ಸಿ.ಬಿ<br>• ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ. |
| 6 | ಶಿಕ್ಷಣ (ಮೂಲಭೂತ ಸೌಕರ್ಯ ಹೊರತುಪಡಿಸಿ) ಕಾರ್ಯಚರಣೆ ತಂಡ | • ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ – ಸದಸ್ಯ ಕಾರ್ಯದರ್ಶಿ.<br>• ಶ್ರೀ. ನಾಗರಹಳ್ಳಿ, ನಿವೃತ ಡಿ.ಡಿ.ಪಿ.ಐ, ಗದಗ<br>• ಶ್ರೀ. ಅಬೂಬಕರ್ ಟಿ.ಎಂ. ಬೋಧಕರು, ಎಎನ್‌ಎಸ್‌ಎಸ್‌ಐ ಆರ್‌ಡಿ & ಪಿಆರ್, ಮೈಸೂರು<br>• ಶ್ರೀಮತಿ ಸೌಮ್ಯ ಪ್ರಶಾಂತ್ ಬೋಧಖರು. ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ. |

| | | |
|---|---|---|
| | | • ಉಪ ನಿರ್ದೇಶಕರು, ವಯಸ್ಕರ ಶಿಕ್ಷಣ ಇಲಾಖೆ, ಗದಗ<br>• ಉಪ ನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ<br>• ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಗದಗ<br>• ಉಪ ನಿರ್ದೇಶಕರು, ಸಮಾಜ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ಗದಗ<br>• ಉಪ ನಿರ್ದೇಶಕರು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಅಲ್ಪಸಂಖ್ಯಾತರ, ಗದಗ<br>• ನೋಡಲ್ ಅಧಿಕಾರಿ, ಐ.ಟಿ.ಐ, ಗದಗ<br>• ನೋಡಲ್ ಅಧಿಕಾರಿ, ಪಾಲಿಟ್ನೇನಿಕ್, ಗದಗ<br>• ನೋಡಲ್ ಅಧಿಕಾರಿ, ವೃತ್ತಿಪರ ಶಿಕ್ಷಣ, ಗದಗ |
| 7 | ಆರೋಗ್ಯ ವಿಷಯದ ಬಗ್ಗೆ ಕಾರ್ಯಚರಣೆ ತಂಡ | • ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ – ಸದಸ್ಯ ಕಾರ್ಯದರ್ಶಿ.<br>• ಡಾ. ನಾಗನೂರ್, ಗದಗ<br>• ಶ್ರೀ ಶಿವಶಂಕರ ರೆಡ್ಡಿ, ನಿವೃತ್ತ ಮುಖ್ಯ ಯೋಜನಾಧಿಕಾರಿ, ಬಳ್ಳಾರಿ.<br>• ಶ್ರೀ ಜಿ. ಮಲ್ಲಿಕಾರ್ಜುನ ಸ್ವಾಮಿ, ಬೋಧಕರು, ಎಎನ್ಎಸ್ಎಸ್ಐಆರ್ಡಿ & ಪಿಆರ್, ಮೈಸೂರು<br>• ಡಾ. ನಾಗವೇಣಿ, ಬೋಧಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.<br>• ಉಪ ನಿರ್ದೇಶಕರು ಆಯುಷ್<br>• ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.<br>• ಸಮುದಾಯ ಔಷಧಗಳ ತಜ್ಞರ ಪ್ರತಿನಿಧಿ.<br>• ಜಿಲ್ಲಾ ಕಣ್ಗಾವಲು ಅಧಿಕಾರಿ, ಗದಗ.<br>• ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿ. |
| 8 | ಬಡತನ ನಿರ್ಮೂಲನಾ ಜೀವನೋಪಾಯ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆಯ ಕಾರ್ಯಚರಣೆ ತಂಡ. | • ಯೋಜನಾ ನಿರ್ದೇಶಕರು, ಗದಗ ಜಿಲ್ಲಾ ಪಂಚಾಯತ್–ಸದಸ್ಯ ಕಾರ್ಯದರ್ಶಿ.<br>• ಉಪ ಕಾರ್ಯದರ್ಶಿ(ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಗದಗ.<br>• ಶ್ರೀ ಕಾಡಶೆಟ್ಟಳ್ಳಿ ಸತೀಶ್, ಗುಬ್ಬಿ.<br>• ಶ್ರೀ ಕೆ.ಆರ್.ಶಂಕರ್, ಬೋಧಕರು, ಎ.ಎನ್.ಎಸ್.ಎಸ್.ಐ.ಆರ್,ಡಿ & ಪಿ.ಆರ್., ಮೈಸೂರು.<br>• ಡಾ. ಅಭಯಕುಮಾರ್ ಎಸ್. ಘಸ್ತಿ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.<br>• ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು, ಗದಗ.<br>• ಅಂಬೇಡ್ಕರ್, ದೇವರಾಜ್ ಅರಸ್ ಮುಂತಾದ ಅಭಿವೃದ್ಧಿ ನಿಯಮಗಳು.<br>• ಸಹಾಯಕ ನಿರ್ದೇಶಕರು, ಎನ್.ಎಸ್.ಎ.ಪಿ.<br>• ಉಪ ನಿರ್ದೇಶಕರು, ಕೌಶಲ್ಯಾಭಿವೃದ್ಧಿ ಇಲಾಖೆ.<br>• ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ, ಗದಗ. |

| | | |
|---|---|---|
| | | • ಜಿಲ್ಲಾ ಉದ್ಯೋಗಾಧಿಕಾರಿ, ಗದಗ.<br>• ಜಿಲ್ಲಾ ಕಾರ್ಮಿಕಾಧಿಕಾರಿ, ಗದಗ.<br>• ಉಪ ನಿರ್ದೇಶಕರು, ಸಣ್ಣ ಕೈಗಾರಿಕೆ.<br>• ಉಪ ನಿರ್ದೇಶಕರು, ಕೆ.ವಿ.ಐ.ಸಿ. |
| 9 | ಸಾಮಾಜಿಕ ಭದ್ರತೆ ಹಾಗೂ ಸಾಮಾಜಿಕ ನ್ಯಾಯ- ಕಾರ್ಯಚರಣೆ ತಂಡ | • ಮುಖ್ಯ ಯೋಜನಾಧಿಕಾರಿ- ಸದಸ್ಯ ಕಾರ್ಯದರ್ಶಿ.<br>• ಶ್ರೀ ಕಾಡಶೆಟ್ಟಳ್ಳಿ ಸತೀಶ್, ಗುಬ್ಬಿ.<br>• ಶ್ರೀ ಕೆ.ಮುರಳಿ, ಸಂಶೋಧನಾಧಿಕಾರಿ, ಎಸ್.ಪಿ.ಆರ್.ಸಿ, ಎ.ಎನ್.ಎಸ್.ಎಸ್.ಐ.ಆರ್,ಡಿ & ಪಿ.ಆರ್., ಮೈಸೂರು.<br>• ಶ್ರೀ ಮನೋಹರ್ ಕೆ. ಲಕ್ಷ್ಮೀ, ಬೋಧಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.<br>• ಉಪ ನಿರ್ದೇಶಕರು, ಪಿಂಚಣಿ, ಜಿಲ್ಲಾಧಿಕಾರಿ ಕಛೇರಿ.<br>• ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.<br>• ಉಪ ನಿರ್ದೇಶಕರು, ಬುಡಕಟ್ಟು ಕಲ್ಯಾಣ ಇಲಾಖೆ.<br>• ಉಪ ನಿರ್ದೇಶಕರು, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ.<br>• ಉಪ ನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ.<br>• ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ, ಗದಗ.<br>• ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು.<br>• ಉಪ ನಿರ್ದೇಶಕರು, ಕಾರ್ಮಿಕ ಇಲಾಖೆ.<br>• ಸಹಾಯಕ ನಿರ್ದೇಶಕರು, ಎನ್.ಎಸ್.ಎ.ಪಿ. |
| 10 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯಚರಣೆ ತಂಡ | • ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗದಗ- ಸದಸ್ಯ ಕಾರ್ಯದರ್ಶಿ.<br>• ಶ್ರೀಮತಿ ಲಕ್ಷ್ಮೀಬಾಯಿ ತಮ್ಮಣ್ಣಗೌಡರ್, ಗದಗ.<br>• ಶ್ರೀ ಮಂಜುನಾಥ ಬೊಮ್ಮನಕಟ್ಟೆ, ಗದಗ.<br>• ಶ್ರೀಮತಿ ದೀಪ ಎನ್. ಸಂಶೋಧನಾಧಿಕಾರಿ, ಎಸ್.ಪಿ.ಆರ್.ಸಿ., ಎ.ಎನ್.ಎಸ್.ಎಸ್.ಐ.ಆರ್,ಡಿ & ಪಿ.ಆರ್., ಮೈಸೂರು.<br>• ಶ್ರೀಮತಿ ಪಕ್ಕೀರಮ್ಮ ಮುರುಗೋಡ್, ಬೋಧಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.<br>• ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಗದಗ.<br>• ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ, ಗದಗ.<br>• ಅಭಿವೃದ್ಧಿ ಇಲಾಖೆಗಳ ಪ್ರತಿನಿಧಿಗಳು.<br>• ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನಗಳ ಒಕ್ಕೂಟದ ಪ್ರತಿನಿಧಿ.<br>• ಗೆಳತಿ ಪೋಲೀಸ್ ಠಾಣೆಯ ಪ್ರತಿನಿಧಿ. |

| | | |
|---|---|---|
| 11 | ನಗರಾಭಿವೃದ್ಧಿ – ಕಾರ್ಯಚರಣೆ ತಂಡ. | • ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ.<br>• ಸಹಾಯಕ ಆಯುಕ್ತರು, ಭೂ–ಸ್ವಾದೀನ.<br>• ಪ್ರೊ. ಎನ್. ನಾರಾಯಣ ಶಾಸ್ತ್ರಿ, ಪಟ್ಟಣ ಮತ್ತು ಪ್ರಾದೇಶಿಕ ಯೋಜನಾ ತಜ್ಞ, ಮೈಸೂರು.<br>• ಡಾ. ಹೇಮಾಂಬರ್ ಬೋಧಕರು, ಎ.ಎನ್.ಎಸ್.ಎಸ್.ಐ.ಆರ್.ಡಿ & ಪಿ.ಆರ್., ಮೈಸೂರು.<br>• ಶ್ರೀ ಪ್ರವೀಣ್ ಅಂಕಲಕೋಟಿ, ಬೋಧಕರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.<br>• ಉಪ ನಿರ್ದೇಶಕರು, ಪಟ್ಟಣ ಮತ್ತು ಗ್ರಾಮೀಣ ಯೋಜನಾ ಇಲಾಖೆ, ಗದಗ.<br>• ಎ.ಇ.ಇ., ಕೆ.ಯು.ಡಬ್ಲ್ಯು.ಎಸ್.ಎಸ್.ಬಿ., ಗದಗ.<br>• ಆಯುಕ್ತರು, ಹೆಚ್.ಯು.ಡಿ.ಎ.<br>• ಕಾರ್ಯಪಾಲಕ ಅಭಿಯಂತರರು, ಕೆ.ಯು.ಐ.ಡಿ.ಎಫ್.ಸಿ.<br>• ಡಿವೈಎಸ್‌ಪಿ, ಪೋಲೀಸ್ ಇಲಾಖೆ.<br>• ಜಿಲ್ಲಾ ಪರಿಸರ ಸಂರಕ್ಷಣಾಧಿಕಾರಿ, ಗದಗ.<br>• ಸಾರಿಗೆ ಅಧಿಕಾರಿ, ಗದಗ.<br>• ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ.<br>• ಜಿಲ್ಲಾ ಸರ್ಜನ್, ಗದಗ.<br>• ಉಪ ನಿರ್ದೇಶಕರು, ಕೊಳಚೆ ನಿರ್ಮೂಲನಾ ಮಂಡಳಿ. |

**ಕಾರ್ಯಚರಣೆ ತಂಡಗಳು ಈ ಕೆಳಕಂಡ ಜವಾಬ್ದಾರಿಗಳನ್ನು ನಿರ್ವಹಿಸುವುದು.**

- ಸಮಿತಿಯು ಹದಿನೈದು ದಿನಗಳಿಗೊಮ್ಮೆ ಸಭೆ ಸೇರಿ ಸಂಬಂಧಿಸಿದ ಕ್ಷೇತದ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ತಯಾರಿಸುವುದು.
- ಕಾರ್ಯಚರಣೆ ತಂಡಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಗಳನ್ನು ತಯಾರಿಸಲು ಅರ್ಹರಿರುವ ಸದಸ್ಯರುಗಳು ಮತ್ತು ಪರಿಣಿತರನ್ನು ಸಹ–ಸದಸ್ಯರನ್ನಾಗಿ ನೇಮಿಸಿಕೊಳ್ಳಬಹುದು.
- ಕಾರ್ಯಚರಣೆ ತಂಡಗಳು ತಮ್ಮ ಕ್ಷೇತ್ರದ ದೂರದೃಷ್ಟಿ ಯೋಜನೆ ತಯಾರಿಸಲು ಅವಶ್ಯವಿರುವ ಮಾಹಿತಿ ಹಾಗೂ ಅಂಕಿ–ಅಂಶಗಳನ್ನು ಸಂಗ್ರಹಿಸಿಕೊಳ್ಳುವುದು. ಈ ಕಾರ್ಯದಲ್ಲಿ ಎಎನ್‌ಎಸ್‌ಎಸ್‌ಐಆರ್‌ಡಿ&ಪಿಆರ್ ಮತ್ತು ಕೆಎಸ್‌ಆರ್‌ಡಿಪಿಆರ್‌ಯು ಬೋಧಕರುಗಳು ಸಮಿತಿಗೆ ನೆರವು ನೀಡುವುದು.
- ಕಾರ್ಯಚರಣೆ ತಂಡಗಳು ತಮ್ಮ ಯೋಜನಾ ವರದಿಗಳನ್ನು ತಯಾರಿಸಲು ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗಳ ಸ್ಥಾಯಿ ಸಮಿತಿಗಳೊಡನೆ ಚರ್ಚೆ ಮಾಹಿತಿ ಪಡೆಯುವುದು.
- ಕಾರ್ಯಚರಣೆ ತಂಡವು ಲಭ್ಯವಿರುವ ದತ್ತಾಂಶವನ್ನು ವಿಶ್ಲೇಷಿಸಬೇಕು ಹಾಗು ಇಡೀ ಜಿಲ್ಲೆಗೆ ಸಂಬಂಧಿಸಿದಂತೆ ಕಿರುವರದಿಯನ್ನು ಸಿದ್ದಪಡಿಸಬೇಕು. ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಕ್ಷೇತ್ರಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ವಿಶ್ಲೇಷಿಸಿಬೇಕು. ಈ ಕ್ಷೇತ್ರಗಳಲ್ಲಿ ಇರುವ ಕೊರತೆಗಳನ್ನು ಗುರುತಿಸಿ ಅವುಗಳನ್ನು ತುಂಬಿಸಲು ದೂರದೃಷ್ಟಿಯಲ್ಲಿ ಅವಕಾಶ ಕಲ್ಪಿಸಬೇಕು.

- ಕಾರ್ಯಚರಣೆ ತಂಡವು ಜಿಲ್ಲಾ ಸಮಗ್ರ ಯೋಜನೆಯನ್ನು ತಯಾರಿಸುವ ವೇಳೆ ಜಿಲ್ಲಾ ನೀರಾವರಿ ಯೋಜನೆ, ಜಿಲ್ಲೆಯ ಸುಸ್ಥಿರ ಅಭಿವೃದ್ಧಿ ಗುರಿಗಳು, ಜಿಲ್ಲೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಸೂಚ್ಯಾಂಕ ಹಾಗೂ ಜಿಲ್ಲೆಯ 2025–ದೂರದೃಷ್ಟಿ ಯೋಜನೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
- ಸಿದ್ದಪಡಿಸಿದ ಸ್ಥಿತ್ಯಂತರ ವರದಿಯನ್ನು ಏಪ್ರಿಲ್ 2020 ಒಳಗೆ ಜಿಲ್ಲಾ ಕೋರ್ ಸಮಿತಿಗೆ ಸಲ್ಲಿಸಬೇಕು.
- ಕಾರ್ಯಚರಣೆ ತಂಡವು ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿಗಾಗಿ ಮಾದರಿಯನ್ನು ಸಿದ್ದಪಡಿಸಬೇಕು.
- ಕಾರ್ಯಚರಣೆ ತಂಡದ ಅಧಿಕಾರೇತರ ಸದಸ್ಯರು ನಿಯಾಮಾನುಸಾರ ಪ್ರಯಾಣ ಭತ್ಯೆ ಹಾಗೂ ಹಾಜರಾತಿ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ಜಿಲ್ಲಾ ಕೋರ್ ಸಮಿತಿ ಮತ್ತು ಹಾಗೂ ಕಾರ್ಯನಿರತ ತಂಡಗಳಿಗೆ ಸಮಗ್ರ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಿ ಕರಡನ್ನು ನಿಗದಿತ ಸಮಯದೊಳಗೆ ರಾಜ್ಯ ಸಲಹಾ ಸಮಿತಿಗೆ ಸಲ್ಲಿಸಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
30/5/2020
**(ಸಿ. ಮಂಜೂರ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

30.05.2020

**ಇವರಿಗೆ:**

1. ಜಿಲ್ಲಾಧಿಕಾರಿಗಳು, ಗದಗ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ.
3. ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತ್, ಗದಗ ಜಿಲ್ಲೆ.
4. ಎಲ್ಲಾ ಮುಖ್ಯಾಧಿಕಾರಿಗಳು, ಗದಗ ಜಿಲ್ಲೆಯ ಎಲ್ಲಾ ಪುರಸಭೆಗಳು.
5. ಉಪ ಆಯುಕ್ತರು, ಎಲ್ಲಾ ಕಂದಾಯ ಉಪ ವಿಭಾಗಗಳು, ಗದಗ ಜಿಲ್ಲೆ.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಮುಖ್ಯ ಕಾರ್ಯದರ್ಶಿಗಳ ಆಪ್ತ ಶಾಖೆ, ಕರ್ನಾಟಕ ಸರ್ಕಾರ.
3. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಆಪ್ತ ಶಾಖೆ, ಕರ್ನಾಟಕ ಸರ್ಕಾರ.
4. ಎಲ್ಲಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.